ಸರ್ವಶಿಕ್ಷಣ ಅಭಿಯಾನ ಯೋಜನೆ

1363(1681); ಶ್ರೀ ಬಸವರಾಜ ಎಸ್ ಬೊಮ್ಮಾಯಿ (ಶಿಗ್ಗಾಂವ್)

ಅ) ರಾಜ್ಯದಲ್ಲಿ ಆರ್.ಎಂ.ಎಸ್.ಎ ಯೋಜನೆ ಪ್ರಗತಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪ್ರಗತಿ ಸಾಧಿಸಲು ಸರ್ಕಾರದ ಕ್ರಮಗಳೇನು;

ಆ) ರಾಜ್ಯದಲ್ಲಿ ಹೆಂಚಿನ ಮೇಲ್ಚಾವಣಿಯಿರುವ ಶಾಲಾ ಕೊಠಡಿಗಳು ಎಷ್ಟು; ಅವುಗಳನ್ನು ಆರ್.ಸಿ.ಸಿ ಆಗಿ ಮಾರ್ಪಾಡು ಮಾಡುವ ಉದ್ದೇಶವಿದೆಯೇ; ಇದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) 2013–14ರಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಮೊತ್ತವೆಷ್ಟು; ಅದರಲ್ಲಿ ಖರ್ಚಾಗಿರುವ ಮೊತ್ತವೆಷ್ಟು?

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ.

- ಆರ್.ಎಂ.ಎಸ್.ಎ ಅಡಿಯಲ್ಲಿ ಮಂಜೂರಾಗಿರುವ 2123 ಕಾಮಗಾರಿಗಳ ಪೈಕಿ 1409 ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. ಉಳಿದ 714 ಕಾಮಗಾರಿಗಳು ನಿವೇಶನ ತಕರಾರು, ನಿವೇಶನ ಇಲ್ಲದಿರುವುದು, ಸಿಬ್ಬಂದಿಗಳ ಕೊರತೆ, ತಾಂತ್ರಿಕ ತಜ್ಞರುಗಳ ಕೊರತೆ ಇತ್ಯಾದಿ ಕಾರಣಗಳಿಂದಾಗಿ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ.

- ಪ್ರಸ್ತುತ ಈ ಯೋಜನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ ಹಾಗೂ 4 ಕಂದಾಯ ವಿಭಾಗಗಳಿಗೆ 8 ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಹಾಗೂ ಪ್ರತಿ ಜಿಲ್ಲೆಗೆ ಒರ್ವ ಸಹಾಯಕ ಅಭಿಯಂತರರನ್ನು ಹೊರಗುತ್ತಿಗೆ

ಸೇವೆಯಲ್ಲಿ ಪಡೆಯಲಾಗಿದೆ. ಇವರ ಮೂಲಕ ಕಾಮಗಾರಿಗಳ ಉಸ್ತುವಾರಿ ಮತ್ತು ಪರೀವೀಕ್ಷಣೆ ಕಾರ್ಯವನ್ನು ನಿರ್ವಹಿಸುತ್ತಿದ್ದು ಶೀಘ್ರಗತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗಿರುತ್ತದೆ.

- ಪ್ರಗತಿಯಲ್ಲಿರುವ ಕಟ್ಟಡ ಕಾಮಗಾರಿಗಳ ಅಂದಾಜು ಪಟ್ಟಿ, ವಿನ್ಯಾಸ, ವರ್ಕ್‌ಸ್ಲಿಪ್, ಹೆಚ್ಚುವರಿ ಐಟಂಗಳ ದರಪಟ್ಟಗಳ ನಿಗದಿ ಮತ್ತು ಪರಿಷ್ಕೃತ ಅಂದಾಜುಗಳ ಪರಿಶೀಲನೆ ಮತ್ತು ಮಾರ್ಗದರ್ಶನಕ್ಕಾಗಿ 03 ಜನ ನಿವೃತ್ತ ಮುಖ್ಯ ಇಂಜಿನಿಯರ್‌ಗಳನ್ನು ಒಳಗೊಂಡ ತಾಂತ್ರಿಕ ಸಲಹಾ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ 165 ಎಂ.ಸಿ.ಡಿ 2014 ದಿನಾಂಕ: 20.10.2014ರಲ್ಲಿ ರಚಿಸಲಾಗಿದ್ದು, ಸಮಿತಿಯು ಈ ದೆಶೆಯಲ್ಲಿ ಕಾರ್ಯಪ್ರವೃತ್ತವಾಗಿದೆ.

- ಎಂ. ಹೆಚ್.ಆರ್.ಡಿ ನಿಯಮಾವಳಿಗಳಂತೆ 3ನೇ ಸಂಸ್ಥೆ / ಬಾಹ್ಯ ಸಂಸ್ಥೆಗಳಿಂದ ಕಾಮಗಾರಿಗಳ ಗುಣಮಟ್ಟ ಕಾಪಾಡಲು ಹಾಗೂ ತಾಂತ್ರಿಕ ಲೆಕ್ಕ ಪರಿಶೀಲನಾ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಂಸ್ಥೆಗಳು 04 ಕಂದಾಯ ವಿಭಾಗ ವ್ಯಾಪ್ತಿಯ ಹಾಗೂ 08 ಉಪ ವಿಭಾಗಳಲ್ಲಿ ತಲಾ ಒಂದರಂತೆ ಕಾರ್ಯ ನಿರತವಾಗಿರುತ್ತದೆ.

ನಿರ್ಮಾಣಗೊಳ್ಳುತ್ತಿರುವ ಕಾಮಗಾರಿಗಳ ಸ್ಥಳಕ್ಕೆ ಅನುಗುಣವಾಗಿ ಕಟ್ಟಡಗಳ ವಿನ್ಯಾಸ ನೀಡಲು ಇಬ್ಬರು ವಿನ್ಯಾಸ ಸಲಹೆಗಾರರನ್ನು ನೇಮಿಸಿಕೊಂಡಿದ್ದು, ಕಾರ್ಯನಿರತವಾಗಿರುತ್ತದೆ.

ಆ) ರಾಜ್ಯದಲ್ಲಿರುವ ಇರುವ ಸರ್ಕಾರಿ ಶಾಲೆಗಳಲ್ಲಿ ಒಟ್ಟು 59955 ಕೊಠಡಿಗಳು ಹೆಂಚಿನ ಮೇಲ್ಚಾವಣಿ ಹೊಂದಿರುತ್ತವೆ./ ಹಂಚಿನ ಮೇಲ್ಚಾವಣಿ ಇರುವ ಕೊಠಡಿಗಳನ್ನು ಆರ್.ಸಿ.ಸಿಯಾಗಿ

ಮಾರ್ಪಡಿಸುವ ಬಗ್ಗೆ ರಾಜ್ಯ ವಲಯದಡಿ ಅನುದಾನ ಕಲ್ಪಿಸಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಆರ್.ಎಂ.ಎಸ್.ಎ ಕಾರ್ಯಕ್ರಮದಲ್ಲಿ ಅವಕಾಶವಿರುವುದಿಲ್ಲ.

ಇ) 2013–14ರಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ₹ 142904.901 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ₹ 116684.696 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

2013–14ರಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನಕ್ಕೆ ಬಿಡುಗಡೆ ಮಾಡಿರುವ ಮತ್ತು ವೆಚ್ಚ ಮಾಡಿರುವ ಅನುದಾನದ ವಿವರ ₹ ಲಕ್ಷಗಳಲ್ಲಿ

ಕೇಂದ್ರ ಅನುದಾನ	ರಾಜ್ಯದ ಅನುದಾನ	ಒಟ್ಟು ವೆಚ್ಚ
₹ 12882.63	₹ 35116.68	₹ 18956.89

ಭಾಗ್ಯಲಕ್ಷ್ಮಿ ಬಾಂಡ್‌ಗಳು

1364(1682); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್)

ಅ) ರಾಜ್ಯದಲ್ಲಿ ಫಲಾನುಭವಿಗಳಿಗೆ ಕೊಡಲು ಬಾಕಿ ಇರುವ "ಭಾಗ್ಯಲಕ್ಷ್ಮಿ ಬಾಂಡ್" ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು);

ಆ) ಬಾಕಿ ಇರುವ ಬಾಂಡ್‌ಗಳಿಗೆ ಒದಗಿಸಿರುವ ಮೊತ್ತ ಎಷ್ಟು; ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?